ಬಿ.ಪಿ.ಎಲ್ ಪಡಿತರ ಚೀಟಿ

505 (763) ಶ್ರೀ ಈಶ್ವರ್ ಭೀಮಣ್ಣ (ಭಾಲ್ಕಿ) : ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಕಳೆದ ಒಂದು ವರ್ಷದ ಅವಧಿಯಲ್ಲಿ ವಿವಿಧ ಮತ ಕ್ಷೇತ್ರಗಳಲ್ಲಿ ಎಷ್ಟು ಬಿಪಿಎಲ್ ಪಡಿತರ ಚೀಟಿಗಳನ್ನು ನೀಡಲಾಗಿದೆ.

ಈ ಅವಧಿಯಲ್ಲಿ ಬಿಪಿಲ್ ಪಡಿತರ ಚೀಟಿಯನ್ನು ಕೋರಿ ಬಂದಿದ್ದ ಅರ್ಜಿಗಳೆಷ್ಟು?

ಆ) ಈ ಅವಧಿಯಲ್ಲಿ ಎಷ್ಟು ಗುರಿಯನ್ನು ಹೊಂದಲಾಗಿತ್ತು. ಈ ಗುರಿಯನ್ನು ಸಾಧಿಸಲಾಗಿದೆಯೇ?

ಇ) ಜಿಲ್ಲೆಯಲ್ಲಿ ನೀಡಿರುವ ಬಹುತೇಕ ಬಿಪಿಎಲ್ ಕಾರ್ಡುಗಳು ಲೋಪದೋಷದಿಂದ ಕೂಡಿರುವ ಬಗ್ಗೆ ಹಾಗೂ ಅನರ್ಹರಿಗೆ ನೀಡಿಕೆಯಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಈ) ಹಾಗಿದ್ದಲ್ಲಿ, ಲೋಪದೋಷಗಳನ್ನು ಸರಿಪಡಿಸಿ ಅರ್ಹರಿಗೆ ಬಿಪಿಎಲ್ ಪಡಿತರ ಚೀಟಿಯನ್ನು ನಿಗಧಿತ ಸಮಯದಲ್ಲಿ ನೀಡಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ?

ಶ್ರೀ ಹೆಚ್. ಹಾಲಪ್ಪ (ಆಹಾರ ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ)

ವಿಧಾನಸಭಾ ಕ್ಷೇತ್ರದ ಹೆಸರು	ನಮ್ಮದಿ ಕೇಂದ್ರಗಳ ಮೂಲಕ ವಿತರಣೆಯಾದ ಪಡಿತರ ಚೀಟಿಗಳು			ಬಿಪಿಎಲ್ ಕೋರಿ ಬಂದ ಒಟ್ಟು ಅರ್ಜಿಗಳು
	ಬಿಪಿಎಲ್	ಎಪಿಎಲ್	ಒಟ್ಟು	
ಬಸವಕಲ್ಯಾಣ	26308	312	26620	26306
ಹುಮನಾಬಾದ	25288	725	26013	25288
ಬೀದರ (ದಕ್ಷಿಣ)	13815	200	14015	13815
ಬೀದರ	24788	2719	27507	24788
ಭಾಲ್ಕಿ	19812	340	20152	19812
ಔರಾದ (ಬಿ)	19978	355	20333	19978
ಒಟ್ಟು	**129989**	**4651**	**134640**	**129989**

ಆ) ಯಾವುದೇ ಗುರಿಯನ್ನು ನೀಡಿರುವುದಿಲ್ಲ.

ಉದ್ಭವಿಸುವುದಿಲ್ಲ.

ಇ) ಕೆಲವು ಪಡಿತರ ಚೀಟಿಗಳಲ್ಲಿ ಲೋಪದೋಷವಿದೆ ಎಂದು ದೂರುಗಳು ಬಂದಿದ್ದು, ಈ ಬಗ್ಗೆ ತಾಲ್ಲೂಕು ಮಟ್ಟದ ಬ್ಯಾಕ್–ಆಫೀಸ್ ಅನ್ನು ಪ್ರಾರಂಭಿಸಿ, ಯಾವುದೇ ಲೋಪದೋಷಗಳು ಇದ್ದಲ್ಲಿ ಸರಿಪಡಿಸಲು ಅವಕಾಶವನ್ನು ನೀಡಲಾಗಿದೆ. ಗಣಕಯಂತ್ರದಲ್ಲಿ ದಾಖಲಾದ ದತ್ತಾಂಶ ಪರಿಶೀಲನೆ ಮೂಲಕ ಅನರ್ಹರನ್ನು ಗುರುತಿಸುವ ಕ್ರಮ ಕೈಗೊಳ್ಳಲಾಗುವುದು.

ಈ) ತಾಲ್ಲೂಕು ಮಟ್ಟದಲ್ಲಿ ಪ್ರಾರಂಭಿಸಲಾಗಿರುವ ಬ್ಯಾಕ್–ಆಫೀಸ್ ಮೂಲಕ, ಯಾವುದೇ ಲೋಪದೋಷಗಳು ಇದ್ದಲ್ಲಿ ಸರಿಪಡಿಸಲು ಅವಕಾಶವನ್ನು ನೀಡಲಾಗಿದೆ.

ನಬಾರ್ಡ್ ಮತ್ತು ಸಿ.ಆರ್.ಎಲ್. ಕಾಮಗಾರಿ

506 (1009) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಎಲ್ಲಾ ವಿಧಾನಸಭಾ ಕ್ಷೇತ್ರಗಳಲ್ಲಿ ನಬಾರ್ಡ್ ಮತ್ತು ಸಿ.ಆರ್.ಎಫ್.ನಲ್ಲಿ ಕಳೆದ ಎರಡು ವರ್ಷಗಳಿಂದ ತೆಗೆದುಕೊಂಡ ಕಾಮಗಾರಿ ಗಳಾವುವು? ಹೆಸರು ಮತ್ತು ಅದರ ಮೊತ್ತ ಕ್ಷೇತ್ರವಾರು ಒದಗಿಸುವುದು;

ಆ) ಕಾರ್ಕಳ ತಾಲ್ಲೂಕಿನ ಕಡಲ ತೀರ್ಥೂಟ್ಟ ಎಂಬಲ್ಲಿ ಒಂದು ಸೇತುವೆ ಕಾಮಗಾರಿಯನ್ನು ಗಾಮನ್ ಇಂಡಿಯಾ ಸಂಸ್ಥೆ ಕೆಲಸವನ್ನು ಕೆ.ಆರ್.ಡಿ.ಸಿ.ಯ ಮುಖೇನ ಪ್ರಾರಂಭಿಸಿ, ಈಗ ಅರ್ಧದಲ್ಲಿ ಬಿಟ್ಟು ಹೋಗಿರುವುದರ ಕಾರಣವೇನು? ಮುಂದೆ ಅದನ್ನು ಹೇಗೆ ಪ್ರಾರಂಭಿಸ ಲಾಗುವುದು?

ಶ್ರೀ ಸಿ.ಎಂ. ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಎರಡು ವರ್ಷಗಳಿಂದ ನಬಾರ್ಡ್ ಮತ್ತು ಸಿ.ಆರ್.ಎಫ್ ಯೋಜನೆಗಳಡಿ ಕ್ಷೇತ್ರಾವಾರು ಮಂಜೂರಾಗಿರುವ ಕಾಮಗಾರಿಗಳ ಪಟ್ಟಿಯನ್ನು ಅನುಬಂಧ–1 ಮತ್ತು 2 ರಲ್ಲಿ ಒದಗಿಸಲಾಗಿದೆ.

ಆ) ದೊಂಡರಂಗಡಿ ರಸ್ತೆಯಲ್ಲಿ ಹಾಲಿ ಇದ್ದಂತಹ ಮುಳುಗು ಸೇತುವೆಯ (LLC) ಕಲ್ಲು ಕಟ್ಟಡವು ಕಂಬವು ಮುರಿದಿದ್ದನ್ನು ಗಮನಿಸಿ